MR. SPEAKER:—Sri H. N. Nanje Gowda, Sri B. P. Gangadhar, Sri C. K. Rajiah Setty and others have given notice of a motion under Rule 59. I am very glad that the Hon. Members are so alert about the interests of the State, whether it is Krishna-Godavari or Cauvery. The motion is admitted and discussion on this motion will take place between 9-00 a. m. and 11 a. m. tomorrow.

CALL ATTENTION TO A MATTER OF URGENT PUBLIC IMPORTANCE.

Re:—Accidental fire at Nandanahosur Village, Holalkere Taluk.

SRI B. PARAMESWARAPPA (HONNALLI):—I call the attention of the Minister for Revenue to the fire accident at Nandanahosur Village, Holalkere Taluk, Chitradurga District.

† SRI H. C. LINGA REDDY (Minister of State for Fisheries and Ports) :—Sir, on behalf of the Hon. Minister for Revenue I am placing this information before the Hon. House.

An accidental fire took place on 22-2-1970 at Nandanahosur Village, Holalkere Taluk, Chitradurga District in which 15 houses, 31 haystacks and stack yet to be thrashed were destroyed. 15 families have lost their entire belonging. Out of these 15 families, 10 are Harijans. The total loss is estimated at Rs. 32,550 Necessary records have been built up for affording relief to the sufferers.

The Deputy Commissioner, Chithradurga, has sanctioned cash grant of Rs. 4,000 to the victims of the fire accident. He has also moved the Divisional Commissioner, Bangalore, for sanctioning an additional amount of Rs. 2,200 to be disbursed to the victims. He has also made arrangements for distributing building materials worth of Rs. 2,000.

The local citizens have also come forward with 4 quintals of Ragi for feeding the fire victims.

ಶ್ರೀ ಬಿ. ಪರಮೇಶ್ವರಪ್ಪ:—೧೫ ಮನೆಗಳಲ್ಲಿ, ೧೦ ಹರಿಜನರದ್ದು, ಇನ್ನು ೫ ಮನೆಗಳು ಬೇರೆಯವರದು. ಹರಿಜನರಿಗೆ ಸರ್ಕಾರ ಫ್ರೀ ಗ್ರಾಂಟಿನಿಂದ ಮನೆ ಕಟ್ಟಿ ಕೊಳ್ಳುವುದಕ್ಕೆ ಅವಕಾಶ ಮಾಡಿದ್ದಾರೆ. ಅದೇರೀತಿ ಬೇರೆ ಹಿಂದುಳಿದ ಜನಗಳಿಗೂ ಫ್ರೀ ಗ್ರಾಂಟಿನಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿ ಕೊಡುತ್ತೀರಾ? ಸುಟ್ಟುಕೊಂಡಿರತಕ್ಕ ಮನೆಗಳವರಿಗೆ ಅರಣ್ಯದಲ್ಲಿ ಬೇಕಾದ ಸಾಮಗ್ರಿಗಳನ್ನು ಫ್ರೀಯಾಗಿ ಕೊಡಲಿಕ್ಕೆ ಒಂದು ವಾರದೊಳಗಾಗಿ ಆಜ್ಞೆ ಮಾಡುತ್ತೀರಾ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ:—ಬೇರೆ ಕುಟುಂಬಗಳವರಿಗೆ ಕೂಡ ಸಹಾಯ ಮಾಡಬೇಕೆಂದು ಡೆಪ್ಯುಟಿ ಕಮಿಷನರು ಅಸಿಸ್ಟೆಂಟ್ ಕಮಿಷನರಿಗೆ ಸೂಚನೆ ಕಳಹಿಸಿದ್ದಾರೆ. ಮುಂದೆ ಇನ್ನೂ ಒಂದು ವರದಿಯನ್ನು ಕಳುಹಿಸುತ್ತೇವೆಂದು ಹೇಳಿದ್ದಾರೆ. ಸಂದರ್ಭಕ್ಕೆ ತಕ್ಕ ಹಾಗೆ ಏನೇನು ಸೌಕರ್ಯ, ಸಹಾಯ, ಒದಗಿಸಬಹುದೋ ಅದನ್ನೆಲ್ಲ ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಬಿ. ಪರಮೇಶ್ವರಪ್ಪ:—ಕೊಟ್ಟಿರತಕ್ಕ ಕ್ಯಾಷ್ ಗ್ರ್ಯಾಂಟನ್ನು ಹಂಚಲು ಡೆಪ್ಯುಟಿ ಕಮಿಷನರಲ್ಲಾಗಲೀ, ಡಿವಿಜನಲ್ ಕಮಿಷನರಲ್ಲಾಗಲೀ ಹಣವಿಲ್ಲ ಎಂದು ಗೊತ್ತಾಗಿದೆ. ಆದುದರಿಂದ ಸರ್ಕಾರ ಕೂಡಲೇ ಹಣವನ್ನು ಕಳುಹಿಸುವುದಕ್ಕೆ ವ್ಯವಸ್ಥೆ ಮಾಡುತ್ತದೆಯೇ ?

ಶ್ರೀ ಎಚ್. ಸಿ. ಲಿಂಗಾ ರೆಡ್ಡಿ:—ಅವರಲ್ಲಿ ಹಣವಿಲ್ಲವೆಂದು ತಿಳಿದು ಬಂದರೆ ಕಳುಹಿಸತಕ್ಕ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಹಾಜಿಶಿವಣ್ಣ:—ಸೌಲಭ್ಯಗಳನ್ನು ಒದಗಿಸುತ್ತೇವೆಂದು ಹೇಳಿದರು. ಏನೇನು ಸೌಲಭ್ಯಗಳನ್ನು ಒದಗಿಸುತ್ತಾರೆಂದು ನಿರ್ದಿಷ್ಟವಾಗಿ ಹೇಳುತ್ತಾರೆಯೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ: —ನಗದು ಹಣ ಕೊಡುತ್ತೇವೆ ಮತ್ತು ಮನೆ ಕಟ್ಟಿಕೊಳ್ಳುವುದಕ್ಕೆ ಸಾಮಾನು ಸರಂಜಾಮುಗಳನ್ನು ಒದಗಿಸುತ್ತೇವೆ. ವಿವರಗಳಿಗೆ ಎರಡನೆಯ ಪರದಿಯನ್ನು ಕಳುಹಿಸುತ್ತೇವೆಂದು ಬರೆದಿದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ:—ಸೌಲಭ್ಯಗಳನ್ನೆಲ್ಲ ಒದಗಿಸಿದ್ದೀರಾ ಎಂಬುದನ್ನು ಖಚಿತವಾಗಿ ಹೇಳಿ ಎಂದರೆ ಜಿಲ್ಲಾಧಿಕಾರಿಗಳು ಒದಗಿಸುತ್ತಾರೆಂದು ಹೇಳುತ್ತಾರೆ.

ನೊಂದ ಹರಿಜನ ಸಂಸಾರಗಳಿಗೆ ಸೋಷಿಯಲ್ ವೆಲ್‌ಫೇರ್ ಇಲಾಖೆ ಕೊಡತಕ್ಕ ಯೋಜನೆಯಿಂದ ಸಹಾಯವನ್ನು ಒದಗಿಸಿಕೊಟ್ಟಿದ್ದೀರಾ ? ಇನ್ನು ಯಾವ ಇಲಾಖೆಯಿಂದ ಸಹಾಯ ದೊರತಿದೆ ಎನ್ನುವುದನ್ನು ಸ್ವಲ್ಪ ಸೂಕ್ಷ್ಮವಾಗಿ ಹೇಳುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ. —ಇಂಥ ಶಂದರ್ಭದಲ್ಲಿ ಏನು ಸಹಾಯ ಮಾಡಬೇಕು ಎನ್ನುವುದಕ್ಕೆ ಸರ್ಕಾರಿ ಆದೇಶಗಳಿವೆ. ಆದರ ಪ್ರಕಾರ ತಕ್ಷಣ ಏನು ಸಹಾಯ ಮಾಡಬಹುದೋ ಅದನ್ನು ಮಾಡಿ ಆ ಮೇಲೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಮುಖಾಂತರ ಏನು ಸಹಾಯ ಮಾಡಬೇಕು ಎನ್ನುವ ವಿಷಯದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

PAPERS LAID ON THE TABLE

SRI K. V. SHANKARA GOWDA (Minister for Education):—Sir, on behalf of the Minister for Industries, I beg to lay the Regulation governing the disposal of lands by the Mysore Industrial Areas Development Board–1969. Notification No. Cl.2.FDB 69 dated 4th September 1969 under Section 42 of the Mysore Industrial Areas Development Act, 1966.

SRI K. V. SHANKARE GOWDA :—On behalf of the Minister for Revenue I beg to lay the Mysore Land Reforms (Amendment)Rules 1969 *vide* Notification No. RD 254 LRY 69, dated 17th January 1970 : the Land Reforms (Legal Assistance to the poor tenants) (Amendment) Rules, 1969, *vide* (Notification No. RD 262 LRY 69, dated 17th January 1970. under Section 140 of the Mysore Land Reforms Act, 1961.